# ದೇವರನ್ನು ಕಾಣಲು ಸಾಧ್ಯವೆ?

ಅದೊಂದು ಪ್ರಸಿದ್ಧ ದೇವಾಲಯ. ಬಹಳ ದೂರದೂರದಿಂದ ಜನರು ದೇವರ ದರ್ಶನ ಪಡೆಯಲು ಅಲ್ಲಿಗೆ ಬರುತ್ತಿದ್ದರು. ಒಮ್ಮೆ ಆ ದೇವಾಲಯಕ್ಕೆ ಮಾಧ್ಯಮಿಕ ಶಾಲೆಯ ಅಂಧ ಮಕ್ಕಳು ಬಂದಿದ್ದರು. ಭದ್ರತಾ ಸಿಬ್ಬಂದಿಯೊಬ್ಬ ಆ ಮಕ್ಕಳನ್ನು ಕರೆದುಕೊಂಡು ಬಂದಿದ್ದ ಗುರುಗಳನ್ನು ಕುರಿತು, 'ಅಲ್ಲಾ ಸರ್, ನಮಗೆ ಕಣ್ಣು ಕಾಣುತ್ತದೆ, ದೇವರನ್ನು ಪ್ರತ್ಯಕ್ಷವಾಗಿ ಕಾಣಲು ಸಾಧ್ಯವಿಲ್ಲದಿದ್ದರೂ, ಮೂರ್ತಿ– ವಿಗ್ರಹಗಳಲ್ಲಿ ದೇವರ ರೂಪ ನೋಡಿ ಸಂತೃಪ್ತರಾಗುತ್ತೇವೆ. ಆದರೆ, ಕಣ್ಣೇ ಕಾಣದ ಈ ಮಕ್ಕಳನ್ನು ಯಾಕೆ ಕರೆದುಕೊಂಡು ಬಂದಿರಿ? ಅವರು ದೇವರನ್ನು ಕಾಣಲು ಹೇಗೆ ಸಾಧ್ಯ?' ಎಂದು ಕೇಳಿದ. ಅದಕ್ಕೆ, ಆ ಮಕ್ಕಳೊಂದಿಗೆ ಬಂದಿದ್ದ ಗುರುಗಳು, 'ನೀನು ಹೇಳುವುದು ನಿಜ, ಇವರಿಗೆ ಆ ದೇವರನ್ನು ನೋಡಲು ಸಾಧ್ಯವಾಗದು. ಆದರೆ, ಆ ದೇವರು ಇವರನ್ನು ನೋಡಬಹುದಲ್ಲ! ಅಷ್ಟೆ ಸಾಕು' ಎಂದರು.

● ಎಂ.ಕೆ. ಮಂಜುನಾಥ್



ಕಲೆ: ಗಣೇಶ ಆಚಾರ್ಯ